**ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.**

**Spl.C. 156/2021**

**P.W.-3**
**C.W.-5**

| | | |
|---|---|---|
| ಹೆಸರು | : | ಮಹೇಶ ಕೆ. |
| ತಂದೆಯ ಹೆಸರು | : | ಕುಂಗಯ್ಯ |
| ವಯಸ್ಸು | : | 44 ವರ್ಷ |
| ಉದ್ಯೋಗ | : | Divisional Mechanical Engineer, Mysuru Rural Division,KSRTC |
| ವಾಸಸ್ಥಳ | : | Mysuru |

**ದಿನಾಂಕಃ 23.12.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ ಃ –**

ನಾನು 2018 ರಿಂದ 2021 ರವರೆಗೆ ನಾನು ಮೈಸೂರಿನ ಬನ್ನಿಮಂಟಪದ ಕೆ ಎಸ್ ಆರ್ ಟಿ ಸಿ ಗ್ರಾಮಾಂತರ ಘಟಕ –2 ರ ಘಟಕ ವ್ಯವಸ್ಥಾಪಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೆ.

2. ನ್ಯಾಯಾಲಯದ ಮುಂದಿರುವ ಆರೋಪಿ ಗೊತ್ತು. ಆತ ನಮ್ಮ ವಿಭಾಗದಲ್ಲಿ ಲೆಕ್ಕ ಪತ್ರ ಮೇಲ್ವಿಚಾರಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು. ಈ ಪ್ರಕರಣದ ಚಾ,ಸಾ. 1 ನಮ್ಮ ಘಟಕದಲ್ಲಿ ಚಾಲಕ cum ನಿರ್ವಾಹಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು.

3. ದಿಃ 10.07.2019 ರಂದು ಚಾ.ಸಾ. 25 ಮತ್ತು ಅವರ ಸಿಬ್ಬಂದಿಯವರು ಆರೋಪಿಯನ್ನು ನಮ್ಮ ಡಿಪೋದೊಳಗೆ ಕರೆದುಕೊಂಡು ಬಂದರು. ಚಾ,ಸಾ. 25 –

ತನಿಖಾಧಿಕಾರಿಯವರು ತಮ್ಮನ್ನು ನನಗೆ ಪರಿಚಯಿಸಿಕೊಂಡು , ಆರೋಪಿ ಚಾ,ಸಾ. 1 ರವರಿಂದ ಲಂಚದ ಹಣವನ್ನು ಪಡೆಯುವಾಗ ಟ್ರಾಪ್ ಮಾಡಲಾಗಿದೆ ಎಂದು ಹೇಳಿದರು. ಆರೋಪಿಯ ಎರಡೂ ಕೈಗಳನ್ನು ಚಾ,ಸಾ. 25 ರವರ ಸಿಬ್ಬಂದಿ ಹಿಡಿದುಕೊಂಡು ಬಂದಿದ್ದರು. ನಮ್ಮ ಡಿಪೋದ ಎದುರು ರಸ್ತೆ ಇದ್ದು , ನಂತರ ಭಾರ್ಗವ ಹೋಟೆಲ್ ಇರುತ್ತದೆ. ಚಾ,ಸಾ. 25 ರವರು , ಆರೋಪಿ ಚಾ,ಸಾ. 1 ರವರಿಂದ ಲಂಚದ ಹಣವನ್ನು ಪಡೆಯುವಾಗ ನಾವು ಹಿಡಿದಿರುತ್ತೇವೆ , ಆ ಹೊಟೇಲ್ ಸಾರ್ವನಿಜಕ ಸ್ಥಳವಾಗಿರುವುದರಿಂದ, ಈ ಡಿಪೋ ಸರ್ಕಾರಿ ಇಲಾಖೆಗೆ ಸಂಬಂಧಪಟ್ಟಿದ್ದಾಗಿರುವುದರಿಂದ , ಇಲ್ಲಿ ಮಹಜರ್ ಮಾಡಲು ಅನುಮತಿ ನೀಡಬೇಕು ಎಂದು ಮೌಖಿಕವಾಗಿ ಕೇಳಿದರು. ಅದಕ್ಕೆ ನಾನು ಒಪ್ಪಿದೆ.

4. ಅಲ್ಲಿ ಚಾ,ಸಾ. 25 ರವರ ಸಿಬ್ಬಂದಿ ಮೂರು ಪ್ಲಾಸ್ಟಿಕ್ ಲೋಟಗಳಲ್ಲಿ ಸೋಡಿಯಂ ಕಾರ್ಬೋನೇಟ್ ಧ್ರಾವಣವನ್ನು ತಯಾರಿಸಕೊಂಡರು. ಮೊದಲು ಆರೋಪಿಯ ಬಲ ಗೈನ ಬೆರಳುಗಳನ್ನು ಆ ಧ್ರಾವಣದಲ್ಲಿ ಅದ್ದಿಸಿದರು. ಅದು ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿತು. ನಂತರ ಅದನ್ನು ಒಂದು ಬಾಟಲಿನಲ್ಲಿ ಹಾಕಿ ಮುಚ್ಚಿ , ಬಟ್ಟೆ ಕಟ್ಟಿ , ಸೀಲು ಮಾಡಿ, ನಮ್ಮ ಸಹಿಗಳನ್ನು ಪಡೆದು ಅಮಾನತ್ತು ಪಡಿಸಿಕೊಂಡರು.

5. ನಂತರ ಇನ್ನೊಂದು ಪ್ಲಾಸ್ಟಿಕ್ ಲೋಟದಲ್ಲಿ ಇದ್ದಂತಹ ಧ್ರಾವಣಕ್ಕೆ ಆರೋಪಿಯ ಎಡ ಗೈನ ಬೆರಳುಗಳನ್ನು ಆ ಧ್ರಾವಣದಲ್ಲಿ ಅದ್ದಿಸಿದರು. ಅದು ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿತು. ನಂತರ ಅದನ್ನು ಒಂದು ಬಾಟಲಿನಲ್ಲಿ ಹಾಕಿ ಮುಚ್ಚಿ , ಬಟ್ಟೆ ಕಟ್ಟಿ , ಸೀಲು ಮಾಡಿ, ನಮ್ಮ ಸಹಿಗಳನ್ನು ಪಡೆದು ಅಮಾನತ್ತು ಪಡಿಸಿಕೊಂಡರು.

6. ನಂತರ ತನಿಖಾಧಿಕಾರಿಯವರ ಹೇಳಿಕೆಯಂತೆ ಆರೋಪಿಗೆ ಒಂದು ಪ್ರತ್ಯೇಕ ಪ್ಯಾಂಟ್ ನ ವ್ಯವಸ್ಥೆಯನ್ನು ನಾನು ಮಾಡಿದೆ. ಆರೋಪಿ ಧರಿಸಿದ್ದ ಪ್ಯಾಂಟ್ ನ ಬಲ ಜೇಬಿನ ಭಾಗವನ್ನು ಆ ಪ್ಲಾಸ್ಟಿಕ್ ಲೋಟದಲ್ಲಿ ಇದ್ದಂತಹ ದ್ರಾವಣದೊಳಗೆ ಅದ್ದಿದಾಗ ಅದು ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿತು. ನಂತರ ಅದನ್ನು ಒಂದು ಬಾಟಲಿನಲ್ಲಿ ಹಾಕಿ ಮುಚ್ಚಿ , ಬಟ್ಟೆ ಕಟ್ಟಿ , ಸೀಲು ಮಾಡಿ, ನಮ್ಮ ಸಹಿಗಳನ್ನು ಪಡೆದು ಅಮಾನತ್ತು ಪಡಿಸಿಕೊಂಡರು.

7. ನಂತರ ಆರೋಪಿ ತನ್ನ ಜೇಬಿನಿಂದ ತೆಗೆದು ಹಾಜರುಪಡಿಸಿದ ನೋಟುಗಳನ್ನು ಅಲ್ಲಿದ್ದ ಪಂಚರಾದ ಚಾ,ಸಾ. 2 ಮತ್ತು 3 ರವರಿಗೆ ನೀಡಿದರು. ಅವರು ಅವುಗಳನ್ನು ಎಣಿಸಿ ನೋಡಿ ಅವುಗಳ ಮೇಲಿನ ಸಂಖ್ಯೆಗಳನ್ನು ಪರಿಶೀಲಿಸಿಕೊಂಡು ಸರಿ ಇವೆ ಎಂದು ಅಭಿಪ್ರಾಯಕ್ಕೆ ಬಂದರು. ನಂತರ ಆ ನೋಟುಗಳನ್ನು ಒಂದು ಪ್ರತ್ಯೇಕ ಕವರ್ ನಲ್ಲಿ ಹಾಕಿ , ಮುಚ್ಚಿ , ಮೊಹರು ಮಾಡಿ , ನಮ್ಮ ಸಹಿಯನ್ನು ಪಡೆದು , ಚಾ.ಸಾ. 25 ರವರು ಪಡೆದುಕೊಂಡರು.

8. ನಂತರ ಆರೋಪಿಯ ಮೇಲೆ ದಸ್ತಗಿರಿ ಕ್ರಮ ಜರುಗಿಸಿದರು. ನಂತರ ಆರೋಪಿ ಮತ್ತು ದೂರುದಾರರು ಆ ದಿನ ಕರ್ತವ್ಯಕ್ಕೆ ಹಾಜರಾಗಿರುವ ಬಗ್ಗೆ ಹಾಜರಾತಿಯ ನಕಲನ್ನು ಕೇಳಿದರು. ಅದನ್ನು ಪಡೆದು , ಕೊಟ್ಟೆ ಅದು ಪುಟ ಸಂಖ್ಯೆ 150 ಮತ್ತು 151 ರಲ್ಲಿ ಅಡಕವಾಗಿರುತ್ತದೆ. ಆರೋಪಿಯ ಹಾಜರಾತಿ ಪುಟ ಸಂಖ್ಯೆ 151 ರಲ್ಲಿ ಅಡಕವಾಗಿದೆ. ಅದನ್ನು ಈಗಾಗಲೇ ನಿಪಿ 13 ಎಂದು ಗುರುತುಪಡಿಸಿಕೊಳ್ಳಲಾಗಿದೆ. ಪುಟ ಸಂಖ್ಯೆ 150 ಮತ್ತು 151 ರ ಮೇಲೆ ನನ್ನ ಸಹಿಗಳು ಇರುತ್ತವೆ. ಸಾಕ್ಷಿ ಗುರುತಿಸಿದ ಸಹಿಗಳನ್ನು ನಿಪಿ 13(ಎ) ಮತ್ತು ನಿಪಿ 13(ಬಿ) ಎಂದು ಗುರುತುಪಡಿಸಿಕೊಳ್ಳಲಾಯಿತು.

9. ಚಾ,ಸಾ. 1 ರವರಿಗೆ ನೀಡಬೇಕಾಗಿದ್ದ ಚೆಕ್ಕನ್ನು ನಾನು ಸಹಿ ಮಾಡಿ ಕೊಟ್ಟಿದ್ದೆ. ಅದು ನಮ್ಮ ಕಛೇರಿಗೆ ಲೆಕ್ಕ ಪತ್ರ ಶಾಖೆಯಲ್ಲಿ ಇತ್ತು. ಅದರ ನಕಲನ್ನು ಈಗ ನೋಡುತ್ತಿದ್ದೇನೆ. ಅದರ ಮೇಲೆ ನನ್ನ ಸಹಿ ಇರುತ್ತದೆ. ಅದನ್ನು ಈಗಾಗಲೇ ನಿಪಿ 14 ಎಂದು ಗುರುತುಪಡಿಸಿಕೊಳ್ಳಲಾಗಿದ್ದು, ಅದರ ಮೇಲೆ ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಪಿ 14(ಎ) ಎಂದು ಗುರುತುಪಡಿಸಿಕೊಳ್ಳಲಾಯಿತು. (ಪುಟ ಸಂಖ್ಯೆ 152 ರಲ್ಲಿ ಇರುತ್ತದೆ).

10. ನಂತರ ತನಿಖಾಧಿಕಾರಿಯವರು ಚಾ,ಸಾ. 1 ರವರು ಹಾಜರುಪಡಿಸಿದ ತಮ್ಮ ಮೊಬೈಲ್ ನ ಚಿಪ್ಪನ್ನು ಲ್ಯಾಪ್ ಟಾಪ್ ಗೆ ಅಳವಡಿಸಿ ಅದರಲ್ಲಿ ಇದ್ದಂತಹ ಸಂಭಾಷಣೆಯನ್ನು ನಮಗೆ ಕೇಳಿಸಿದರು. ಸದರಿ ಸಂಭಾಷಣೆಯನ್ನು ನಾನು ಕೇಳಿ , ಆ ಸಂಭಾಷಣೆಯಲ್ಲಿ ಕೇಳಿ ಬಂದ ಧ್ವನಿಗಳು ಚಾ,ಸಾ. 1 ಮತ್ತು ಆರೋಪಿಯದ್ದು ಎಂದು ಗುರುತಿಸಿದೆ. ಏಕೆಂದರೆ ಅವರಿಬ್ಬರು ಸುಮಾರು ಒಂದೂವರೆ ವರ್ಷಗಳಿಂದ ನನ್ನ ಕಛೇರಿಯಲ್ಲಿ ಕೆಲಸ ಮಾಡುತ್ತಿದ್ದರು. ಹೀಗಾಗಿ ಅವರ ಧ್ವನಿಯ ಪರಿಚಯ ನನಗೆ ಇತ್ತು.

11. ನಂತರ ಮೇಲ್ಕಂಡ ಪ್ರಕ್ರಿಯಗಳ ಬಾಬ್ತು ಅಲ್ಲಿ ಮಹಜರ್ ಮಾಡಿ ನಮ್ಮ ಸಹಿಯನ್ನು ಪಡೆದರು. ಸದರಿ ಮಹಜರ್ ನ್ನು ಈಗ ನೋಡುತ್ತಿದ್ದೇನೆ. ಅದರ ಮೇಲೆ ನನ್ನ ಸಹಿ ಇರುತ್ತದೆ. ಸದರಿ ಮಹಜರ್ ನ್ನು ಈಗಾಗಲೇ ನಿಪಿ 24 ಎಂದು ಗುರುತುಪಡಿಸಿಕೊಳ್ಳಲಾಗಿದ್ದು, ಅದರ ಮೇಲೆ ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಪಿ 24(ಸಿ) ಎಂದು ಗುರುತುಪಡಿಸಿಕೊಳ್ಳಲಾಯಿತು. ನಮ್ಮ ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸುವ ಗುಮಾಸ್ತರಾದ ಸುಲೈಮಾನ್ ರವರು ಸಹ ಸಹಿ ಹಾಕಿರುತ್ತಾರೆ. ಅವರ ಸಹಿಯನ್ನು ಗುರುತಿಸುತ್ತೇನೆ. ಸಾಕ್ಷಿ ಗುರುತಿಸಿದ ಸುಲೈಮಾನ್ ರವರ ಸಹಿಯನ್ನು ನಿಪಿ 24(ಡಿ) ಎಂದು

ಗುರುತುಪಡಿಸಿಕೊಳ್ಳಲಾಯಿತು. ನಿಪಿ 24 ರ ಮೇಲೆ ಆರೋಪಿಯ ಸಹಿ ಕೂಡ ಇರುತ್ತದೆ. ಸಾಕ್ಷಿ ಆರೋಪಿಯ ಸಹಿಯನ್ನು ಗುರುತಿಸಿದ್ದು, ಅದನ್ನು ನಿಪಿ 24(ಇ) ಎಂದು ಗುರುತುಪಡಿಸಿಕೊಳ್ಳಲಾಯಿತು.

12. ತನಿಖಾಧಿಕಾರಿಯವರ ಮುಂದೆ ನನ್ನ ಹೇಳಿಕೆಯನ್ನು ನೀಡಿರುತ್ತೇನೆ.

13. ತನಿಖಾಧಿಕಾರಿಯವರು ಆರೋಪಿಯನ್ನು ದಸ್ತಗಿರಿ ಮಾಡಿದ ಬಾಬ್ತು , ದಸ್ತಗಿರಿ ತಿಳುವಳಿಕೆ ಪತ್ರವನ್ನು ನನಗೆ ನೀಡಿದ್ದು , ಅದರ ಮೇಲೆ ನನ್ನ ಸಹಿ ಇರುತ್ತದೆ. ಸದರಿ ನೋಟೀಸನ್ನು ಈಗ ನಿಪಿ 26 ಎಂತಲು, ಅದರ ಮೇಲೆ ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಪಿ 26(ಎ) ಎಂತಲು ಗುರುತುಪಡಿಸಿಕೊಳ್ಳಲಾಯಿತು.

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ –**

14. ಆರೋಪಿ ನಮ್ಮ ಘಟಕದಲ್ಲಿ ಇದ್ದಾಗ ಲೆಕ್ಕ ಪತ್ರ ಶಾಖೆಯಲ್ಲಿ ಇದ್ದರು. ಅವರ ಕರ್ತವ್ಯ ದಿನಾಲೂ ನಮ್ಮ ಘಟಕ್ಕೆ ಸಂದಾಯವಾಗುವ ಆದಾಯವನ್ನು ನಮ್ಮ ಇಲಾಖೆಯ ಕೇಂದ್ರ ಕಛೇರಿಯ ಖಾತೆಗೆ ಸಂದಾಯ ಮಾಡುವುದು ಮತ್ತು ನಮ್ಮ ಘಟಕದ ಎಲ್ಲಾ ಅಧಿಕಾರಿಗಳು ಮತ್ತು ನೌಕರರ ವೇತನ ಪಟ್ಟಿ ವಹಿಯನ್ನು ತಯಾರಿಸುವುದು ಆಗಿತ್ತು. ಚೆಕ್ಕುಗಳ ಮೇಲೆ ನಾನು ಮತ್ತು ಆರೋಪಿ ಜಂಟಿ ಸಹಿಯನ್ನು ಹಾಕುತ್ತಿದ್ದೆವು. ನಾನು ಸಹಿ ಹಾಕಿದ ನಂತರ ಚೆಕ್ಕನ್ನು ಆರೋಪಿಗೆ ಕೊಡುತ್ತಿದ್ದೆ. ಇಬ್ಬರು ಸಹಿ ಹಾಕಿದ ನಂತರ ಆ ಚೆಕ್ಕು ನಗದು ಶಾಖೆಗೆ ಹೋಗಿ ಅಲ್ಲಿಂದ ಸಂಬಂಧಪಟ್ಟವರ ಖಾತೆಗೆ ಜಮಾ ಆಗುತ್ತಿತ್ತು ಎನ್ನುವುದು ಸರಿ. ಆರೋಪಿ ನಗದು ಶಾಖೆಯಲ್ಲಿ ಕೆಲಸ ಮಾಡುತ್ತಿರಲಿಲ್ಲ , ಆದರೆ ಆ ಶಾಖೆಯ ಮೇಲುಸ್ತುವಾರಿಯನ್ನು ನೋಡಿಕೊಳ್ಳುತ್ತಿದ್ದರು.

15. ಈ ಘಟನೆ ನಡೆಯಿತು ಎನ್ನಲಾದ ದಿನಕ್ಕೂ ಮುಂಚೆ ಚಾ,ಸಾ. 1 ರವರು ನನ್ನನ್ನು ಆತನ ಚೆಕ್ಕ ಬಾಬ್ತು ಭೇಟಿ ಮಾಡಿರುವುದಿಲ್ಲ. ಚಾ,ಸಾ. 1 ರವರಿಗೆ ಸಲ್ಲಬೇಕಾಗಿದ್ದ ಚೆಕ್ಕು 7 ನೇ ತಾರೀಖಿನಂದೇ ರೆಡಿ ಆಗಿತ್ತು. ಅದು ರೆಡಿ ಆದ ನಂತರ ದಿನಾಂಕ 07 ರಿಂದ 10 ನೇ ತಾರೀಖಿನವರೆಗೆ ಲೆಕ್ಕ ಪತ್ರ ವಿಭಾಗದ ಶಾಖೆಯಲ್ಲಿ ಇತ್ತು. ಪೋಲೀಸರು ಆ ಚೆಕ್ಕನ್ನು ನಗದು ಶಾಖೆಯ ಗುಮಾಸ್ತರಾದ ಸುಲೈಮಾನ್ ರವರಿಂದ ಪಡೆದು ಅಮಾನತ್ತು ಪಡಿಸಿಕೊಂಡರು. ಚೆಕ್ಕಿಗೆ ನನ್ನ ಹಾಗೂ ಆರೋಪಿಯ ಸಹಿ ಆದ ನಂತರ ಅದು ನಗದು ಶಾಖೆಗೆ ಹೋಗಿ ಅಲ್ಲಿಯ ಸಂಬಂಧಪಟ್ಟ ಗುಮಾಸ್ತರ ಬಳಿಯಲ್ಲಿ ಇರುತ್ತದೆ ಎನ್ನುವುದು ಸರಿ.

16. ಈ ಪ್ರಕರಣದ ಘಟನೆ ನಡೆದ ದಿನದಂದು ಆ ಚೆಕ್ಕಿನ ಬಾಬ್ತು ಆರೋಪಿಯ ಕೆಲಸ ಬಾಕಿ ಇರಲಿಲ್ಲ ಎನ್ನುವುದು ಸರಿ.

17. ತನಿಖಾಧಿಕಾರಿಯವರು ಆರೋಪಿಯಿಂದ ಹಣವನ್ನು ತೆಗೆಸಿದಾಗ ಹಣ ಒಂದು ಪತ್ರದ ಒಳಗೆ ಇತ್ತು ಎನ್ನುವುದು ಸರಿ. ಆ ಪತ್ರವನ್ನು ತೆರೆದು ನೋಡಿದಾಗ ಅದರಲ್ಲಿ ಚಾ,ಸಾ. 1 ರವರ ಮನವಿ ಇತ್ತು. ಅದರಲ್ಲಿ ಆತ , ನಾನು ಜೀವನಕ್ಕಾಗಿ ಯಾವುದೇ ಕೆಲಸವನ್ನು ಮಾಡುತ್ತಿಲ್ಲ , ನನ್ನ ಅಮಾನತ್ತಿನ ಅರ್ಧ ಸಂಬಳವನ್ನು ಮಂಜೂರು ಮಾಡಿ ಎಂದಿತ್ತು.

18. ನನಗೆ ಕೇಳಿಸಿದ ಆ ಸಂಭಾಷಣೆಯಲ್ಲಿ, ಆರೋಪಿ ದೂರುದಾರರಲ್ಲಿ ರೂ.10,000/- ಲಂಚ ಕೊಡಬೇಕು ಎಂದು ಕೇಳಿರುವುದಿಲ್ಲ.

19. ಚಾ,ಸಾ. 1 ರವರನ್ನು ಅಮಾನತ್ತು ಪಡಿಸಲಾಗಿದ್ದರಿಂದ , ನಮ್ಮ ಇಲಾಖೆಗೆ ಕೆಟ್ಟ ಹೆಸರು ತರಬೇಕು ಎನ್ನುವ ಉದ್ದೇಶದಿಂದ ಆರೋಪಿಯ ವಿರುದ್ಧ ಒಂದು ಸುಳ್ಳು ದೂರನ್ನು ನೀಡಿ,

ಎಸಿಬಿಸಿ ರವರಿಂದ ಹಿಡಿಸಿರುತ್ತಾರೆ ಎಂದು ಮಾಡಿದ ಸಲಹೆಗೆ , ಸಾಕ್ಷಿ , "ನನಗೆ ಗೊತ್ತಿಲ್ಲ " ಎನ್ನುತ್ತಾರೆ.

**ಮರುವಿಚಾರಣೆಃ ಇಲ್ಲಾ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ

3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಮೈಸೂರು.